


International Journal of Kannada Research
www.kannadajournal.com

**ISSN: 2454–5813**
IJKR 2020; 6(1): 93-95
© 2020 IJKR
www.kannadajournal.com
Received: 19-11-2019
Accepted: 21-12-2019

**ನಗಿನಾ ಪಾಯಪ್ಪನವರ**
ಸಂಶೋಧನ ವಿದ್ಯಾರ್ಥಿ, ಡಾ.ಆರ್ ಸಿ ಹೀರೆಮಠ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

**ಮಾರ್ಗದರ್ಶಕರು**
ಡಾ.ಅನಿತಾ ಕೆ. ಗುಡಿ
ಸಹಾಯಕ ಪ್ರಾಧ್ಯಾಪಕರು
ಡಾ.ಅರ್ ಸಿ ಹೀರೆಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

**Corresponding Author:**
**ನಗಿನಾ ಪಾಯಪ್ಪನವರ**
ಸಂಶೋಧನ ವಿದ್ಯಾರ್ಥಿ, ಡಾ.ಆರ್ ಸಿ ಹೀರೆಮಠ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

# ಪ್ರೊ.ಮಾಲತಿ ಪಟ್ಟಣಶೆಟ್ಟಿಯವರ 'ಆನಂದ ವಿಹಾರ' ಕಥೆಯಲ್ಲಿ ಸಾಮಾಜಿಕ ಪ್ರಜ್ಞೆ

**ನಗಿನಾ ಪಾಯಪ್ಪನವರ, ಮಾರ್ಗದರ್ಶಕರು**

**ಪ್ರಸ್ತಾವನೆ:** ಕನ್ನಡ ಸಾರಸ್ವತ ಲೋಕದಲ್ಲಿ ಮಹಿಳಾ ಕಥಾ ಸಾಹಿತ್ಯಕ್ಕೆ ಅನೇಕ ಲೇಖಕಿಯರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ನವ್ಯ ಹಾಗೂ ಬಂಡಾಯ ಕಾಲಘಟ್ಟದಲ್ಲಿ ಸಾಹಿತ್ಯ ರಚನೆ ಮಾಡಿರುವ ಪ್ರೊ. ಮಾಲತಿ ಪಟ್ಟಣಶೆಟ್ಟಿಯವರು ಕಥಾ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಮಹಿಳಾ ಪ್ರತಿಭಟನೆಗಳನ್ನೇ ಕಥಾ ವಸ್ತುವಾಗಿ ಮಾಡಿಕೊಂಡು ಅನೇಕ ಕಥೆಗಳನ್ನು ರಚಿಸಿದ್ದಾರೆ. ಸಾಮಾನ್ಯವಾಗಿ ಇವರ ಕಥೆಗಳಲ್ಲಿ ಸಾಮಾಜಿಕ ಕಾಳಜಿ, ವೈಚಾರಿಕ ಚಿಂತನೆ, ಹಾಗೂ ಮುಕ್ತ ಚಿಂತನೆಯಂತಹ ನಿದರ್ಶನಗಳನ್ನು ಕಾಣಬಹುದು. ಪ್ರೊ. ಮಾಲತಿ ಪಟ್ಟಣಶೆಟ್ಟಿಯವರ 'ಇಂದು ನಿನ್ನಿನ ಕಥೆಗಳು' ಕಥಾ ಸಂಕಲನ ಪ್ರಕಟವಾದದ್ದು 1988ರಲ್ಲಿ. ಈ ಕಥಾ ಸಂಗ್ರಹದಲ್ಲಿ ಒಟ್ಟು 7 ಕಥೆಗಳಿವೆ. ಪ್ರಸ್ತುತ ಸಮಾಜದ ಸಮಸ್ಯೆಗಳನ್ನೇ ಕೇಂದ್ರವಾಗಿಟ್ಟುಕೊಂಡು, ಸಾಮಾಜಿಕ ಬದಲಾವಣೆಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರೊ. ಮಾಲತಿ ಪಟ್ಟಣಶೆಟ್ಟಿಯವರು ರಚಿಸಿರುವ ಕಥಾ ಸಾಹಿತ್ಯ ಹತ್ತು ಹಲವಾರು. ಇಂತಹ ಕಥಾ ಸಾಹಿತ್ಯದಲ್ಲಿ ಇಂದು ನಿನ್ನಿನ ಕಥೆಗಳು ಕಥಾಸಂಕಲನದ 'ಆನಂದ ವಿಹಾರ' ಕಥೆಯೂ ಒಂದು. ಸಮಾಜ ಮತ್ತು ಸಾಹಿತ್ಯಕ್ಕೆ ಅವಿನಾಭಾವ ಸಂಬಂಧವಿದೆ. ಸಾಹಿತ್ಯದ ಹೊರತಾಗಿ ಸಮಾಜವಿಲ್ಲ ಸಮಾಜದ ಹೊರತಾಗಿ ಸಾಹಿತ್ಯವಿಲ್ಲ. ಲೇಖಕರು ಸಮಾಜದ ಅಂಗವಾಗಿ ಬೆಳೆಯುವುದರಿಂದ ಸಾಮಾಜಿಕ ಪರಿಸರದ ಪ್ರಭಾವ ಅವರ ಮೇಲೆ ಆಗುತ್ತದೆ. ಸಾಹಿತ್ಯದ ಮುಖ್ಯ ಉದ್ದೇಶ ಆಯಾ ಸಮಾಜದ ಜನಜೀವನಕ್ಕೆ ಸ್ಪಂದಿಸಿ, ಹೊಸ ಅಭಿರುಚಿ ಹುಟ್ಟುವಂತೆ ಮಾಡುವುದು. ಸಮಾಜದಲ್ಲಿನ ಅಪಮೌಲ್ಯಗಳನ್ನು ತೊಡೆದು ಹಾಕಿ ಹೊಸ ಮೌಲ್ಯಗಳನ್ನು ಸೃಷ್ಟಿಸುವ ಮೂಲಕ ಬದಲಾವಣೆ ಮಾಡುವುದಾಗಿದೆ. ಪ್ರಸ್ತುತ ಲೇಖನವು 'ಆನಂದ ವಿಹಾರ' ಕಥೆಯು ಒಳಗೊಂಡಿರುವ ಸಾಮಾಜಿಕ ಕಳಕಳಿಯ ಅಂಶಗಳನ್ನು ಪ್ರಸ್ತುತಪಡಿಸುತ್ತದೆ. ಸಾಮಾಜಿಕ ಅನ್ಯಾಯದ ವಿರುದ್ಧ ಬಂಡೆಳುವ ಮೂಲಕ ಬದಲಾವಣೆ ಹೇಗಾಗುತ್ತದೆ ಎಂಬುದೇ ಈ ಲೇಖನದ ವಸ್ತುಸ್ಥಿತಿಯಾಗಿದೆ.

**ಕೀ ವರ್ಡ್ಸ್:** ಆನಂದ ದೇಸಾಯಿ, ಲೈಸೆನ್ಸ, ವಿಷಾದ, ಸಾಮಾಜಿಕ ಪ್ರಜ್ಞೆ, ಸರಪಂಚರು, ಮೀಟಿಂಗ್, ಸಭೆ, ಯುವಕ ಮಂಡಲ, ಶಾಲೆ, ಆಫೀಸ್, ಅಭಿವ್ಯಕ್ತಿ.

## ಸಾರಾಂಶ

ಆನಂದ ವಿಹಾರ ಕಥೆಯ ಶೀರ್ಷಿಕೆ ನೋಡಿದಾಗ ಇದೊಂದು ವೃದ್ಧಾಶ್ರಮ ಇಲ್ಲವೇ ಅನಾಥಾಶ್ರಮ ಇರಬಹುದೆಂದು ತೋಚುತ್ತದೆ. ಆದರೆ ಕಥೆಯನ್ನು ಓದಿದಾಗ ಅದೊಂದು ಮಧ್ಯದಂಗಡಿಯ ನಾಮಫಲಕವೆಂಬುದು ತಿಳಿಯುತ್ತದೆ. ಈ ಕಥೆಯ ಕಥಾ ನಾಯಕ ನವಿಲೂರಿನ ಪ್ರಾಥಮಿಕ ಶಾಲೆಯ ಆದರ್ಶವಾದಿ ಶಿಕ್ಷಕ ಆನಂದ ದೇಸಾಯಿ. ಒಂದು ಕಾಲದಲ್ಲಿ ಈ ಊರಿನ ಮೊರಡಿಗಳಲ್ಲಿ ನವಿಲುಗಳು ಆಡುತ್ತಿದ್ದರಿಂದ ಈ ಊರಿಗೆ ನವಿಲೂರು ಎಂಬ ಹೆಸರು ಬಂದಿತು. ಶಾಂತ ವಾತವರಣದ ಈ ಊರಿನಲ್ಲಿ ಆನಂದ ವಿಹಾರ ಎಂಬ ಸಾರಾಯಿ ಅಂಗಡಿಯಿಂದಾಗಿ ಊರಿನ ವಾತಾವರಣ ಕೆಡುತ್ತದೆ. ಎರಡು ತಿಂಗಳ ಬೇಸಿಗೆ ರಜಾ ಅವಧಿಯಲ್ಲಿ ಎಂ.ಎಡ್ ತರಬೇತಿಯನ್ನು ಪೂರ್ಣಗೊಳಿಸಿ ಊರಿಗೆ ಮರಳಿದ ಶಿಕ್ಷಕ ಆನಂದ ದೇಸಾಯಿ ಊರಲ್ಲಿನ ಸಾರಾಯಿ ಅಂಗಡಿಯನ್ನು ನೋಡಿ ರೋಷ ಉಕ್ಕತೊಡಗಿತು. ಸಾರಾಯಿ ಅಂಗಡಿಯನ್ನು ಊರಿನಿಂದ ಕಿತ್ತುಹಾಕಬೇಕೆಂದು ಶಾಲೆಯ ಶಿಕ್ಷಕರು ಆನಂದ ದೇಸಾಯಿ ಮುಂದಾಳತ್ವದಲ್ಲಿ ಊರಿನ ಸರಪಂಚರಿಗೆ ಅರ್ಜಿ ಸಲ್ಲಿಸಿದರು.

ಒಂದು ದಿನ ಸಾರ್ವಜನಿಕ ಸಭೆಯನ್ನು ಕರೆದರು. ದೊಂಡುಸಾ ದಬಾಡಿ ಸರಕಾರಿ ಲೈಸೆನ್ಸ್ ಪಡೆದು ಸಾರಾಯಿ ಅಂಗಡಿ ಆರಂಭಿಸಿದರ ಬಗ್ಗೆ ಚರ್ಚೆ ಆರಂಭವಾಯಿತು. ಬಾಪುಗೌಡರು 'ಆನಂದ ವಿಹಾರ' ಅಂಗಡಿಯನ್ನು ಇಡಬೇಕೋ, ಕಿತ್ತೊಗೆಯಬೇಕೋ, ಎಂದು ಪ್ರಶ್ನಿಸಿದಾಗ ದೊಡ್ಡಮನಿ ಸಾಹುಕಾರ್ರು, ಪಂಚರಾದ ರಾಚಪ್ಪ ಸಾಣಿಕೊಪ್ಪ, ಶಿವಪ್ಪ ಭೈರನಟ್ಟಿ ಇವರೆಲ್ಲಾ ದಬಾಡಿಯೊಂದಿಗೆ ಶಾಮೀಲಾಗಿದ್ದರಿಂದ ಅಂಗಡಿಯನ್ನು ಕಿತ್ತೊಗೆಯುವುದು ಬೇಡ, ಶಾಲೆಯ ಹತ್ತಿರದ ಬದಲಾಗಿ ಊರ ಹೊರಗೆ ಆರಂಭಿಸಲಿ ಎಂದು ಸೂಚಿಸಿದರು. ಬೆರಳೆಣಿಕೆಯಷ್ಟು ಜನರು ಮಾತ್ರ ಸಾರಾಯಿ ಅಂಗಡಿ ಕಿತ್ತೊಗೆಯಬೇಕು ಎಂದರು. ಇದರಿಂದ ಬಹುಮತದಂತೆ ಊರ ಹೊರಗೆ 'ಆನಂದ ವಿಹಾರ' ಅತೀ ವೇಗವಾಗಿ ಬೆಳೆಯಿತು.

ಆನಂದ ವಿಹಾರ ಪ್ರಾರಂಭವಾಗಿ ಎಂಟು ತಿಂಗಳಲ್ಲಿ ಊರಿನ ವಾತಾವರಣ ಸಂಪೂರ್ಣ ಹದಗೆಟ್ಟಿತು. ಊರಿನ ಬಹುಪಾಲು ಜನರು ಕುಡಿತದ ಚಟಕ್ಕೆ ಬಲಿಯಾದರು. ಸ್ವಲ್ಪ ದಿನದಲ್ಲೇ ಊರಿನಲ್ಲಿ ಎರಡು ಪಂಗಡಗಳಾಗಿ ಕಿತ್ತಾಟ, ಜಗಳಗಳು ಶುರುವಾದವು. ಬಾಪುಗೌಡ ಪಾಟೀಲರ ಮಗ ಸುರೇಶ ಮತ್ತು ಭೈರನಟ್ಟಿಯವರ ಮಗ ಶಿವಪ್ರಕಾಶ್ ಸೆರೆ ಕುಡಿದು ಊರ ಹುಡುಗಿಯರನ್ನು ಛೇಡಿಸಿದಕ್ಕಾಗಿ ಊರವರಿಂದ ಹೊಡೆತ ತಿಂದು ಜೈಲುವಾಸ ಅನುಭವಿಸುತ್ತಾರೆ. ಇವರು ವಾಪಸ್ಸು ಬಂದ ನಂತರ ಊರಲ್ಲಿ ಒಂದು ಕೊಲೆಯಾಗುತ್ತದೆ. ಊರಿನ ಸರಪಂಚರು ಹಾಗೂ ಭೈರನಟ್ಟಿಯವರ ಕೈವಾಡವಿದೆಯೆಂದು ಪೋಲಿಸರು ಇವರನ್ನು, ಮತ್ತು ಊರಿನ ಹದಿನೈದು ಮಂದಿಯನ್ನು ಬಂಧಿಸುತ್ತಾರೆ. ಇವರು ವಾಪಸ್ಸು ಊರಿಗೆ ಬಂದಾಗ ಇವರಿಬ್ಬರ ಮಕ್ಕಳು ಊರ ಹುಡುಗಿಯೊಬ್ಬಳನ್ನು ಓಡಿಸಿಕೊಂಡು ಹೋಗಿರುತ್ತಾರೆ. ಹೀಗೆ ಶಾಂತ ಪರಿಸರದ ನಡುವೆ ಆರಂಭವಾದ ಆನಂದ ವಿಹಾರ ಊರಿನ ಸ್ವಾಸ್ಥ್ಯವನ್ನೇ ಹಾಳು ಮಾಡುತ್ತದೆ. ಇಷ್ಟೆಲ್ಲಾ ಆದ ನಂತರ ಊರಿನಲ್ಲಿ ಮತ್ತೊಂದು ಸಾರ್ವಜನಿಕ ಸಭೆ ಕೂಡುತ್ತದೆ. ಆಗ ಸರಪಂಚರು ಮೇಲೆದ್ದು "ಎಲ್ಲರಿಗೂ ಶರಣು... ಈಗ ನಾವು ಈ ಸೆರೆದಂಗಡಿ"...ಎಂದು ಮಾತು ಆರಂಭಿಸುತ್ತಿದ್ದಂತೆಯೇ ಊರಿನ ಆದರ್ಶವಾದಿ ಶಿಕ್ಷಕ ಆನಂದ ದೇಸಾಯಿ ಮತ್ತು ಊರಿನ ಮೂವತ್ತು ತರುಣರ ಗುಂಪು ಎದ್ದು ನಿಂತು "ಈ ಸೆರೆದಂಗಡಿ ನೀವು ಮುಚ್ಚಿಸದಿದ್ದರ ನಾವು ನಾಳಿಂದ ನಾಳೆ ಮುಚ್ಚತೇವಿ"... ಎಂದು ಘೋಷಣೆ ಕೂಗತೊಡಗಿದರು. ಮರುದಿನ ಬೆಳಗಾಗುವುದರೊಳಗೆ ಸಾರಾಯಿ ಅಂಗಡಿ ಮಾಲೀಕ ದಬಾಡಿಯವರು ಸಾಮಾನು ಹೇರಿಕೊಂಡು ಹೊರಟು ಹೋಗಿದ್ದರು. 'ಆನಂದ ವಿಹಾರ' ಬೋರ್ಡನ್ನು ಕಿತ್ತೊಗೆದು 'ನವಿಲೂರಿನ ಯುವಕ ಮಂಡಲ' ಎಂಬ ಬೋರ್ಡು ಮೇಲೆರುವದರೊಂದಿಗೆ ಕಥೆ ಮುಕ್ತಾಯವಾಗುತ್ತದೆ.

ಪ್ರೊ. ಮಾಲತಿ ಪಟ್ಟಣಶೆಟ್ಟಿಯವರು ಈ ಕಥೆಯ ಮೂಲಕ ಮದ್ಯದಂಗಡಿ ಸಮಾಜದ ಮೇಲೆ ಯಾವೆಲ್ಲಾ ರೀತಿಯಲ್ಲಿ ಪರಿಣಾಮ ಬೀರುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಮದ್ಯ ಸೇವನೆ ದೇಹದ ಸ್ವಾಸ್ಥ್ಯ ಹಾಳು ಮಾಡುವುದಲ್ಲದೇ ಸುತ್ತಲಿನ ಪರಿಸರವನ್ನು ಕಲುಷಿತಗೊಳಿಸುತ್ತದೆ. ಗ್ರಾಮದ ಪ್ರಜೆಗಳ ಸಂಕಷ್ಟಕ್ಕೆ ಬೆಲೆಯನ್ನೇ ಕೊಡದ ಊರಿನ ಸರಪಂಚರಿಗೆ ಸಮಯವೇ ಸರಿಯಾದ ಪಾಠ ಕಲಿಸುತ್ತದೆ. 'ಉಪ್ಪು ತಿಂದವ ನೀರು ಕುಡಿಯಲೇಬೇಕು' ಎಂಬ ಗಾದೆಯಂತೆ ಇಲ್ಲಿ ಊರಿನ ಸರಪಂಚರಿಗೆ ಸಮಯವೇ ಸರಿಯಾದ ಪಾಠ ಕಲಿಸುತ್ತದೆ. ಹೀಗೆ ಸಮಾಜದಲ್ಲಿ ಮೋಸ, ವಂಚನೆ, ದೌರ್ಜನ್ಯಗಳು ಶಾಶ್ವತವಲ್ಲ ಎಂಬುದನ್ನು ಈ ಕಥೆಯಿಂದ ಮನಗಾಣಬಹುದಾಗಿದೆ.

**ಭಾಷೆ ಮತ್ತು ಶೈಲಿ**

ಭಾಷೆ ಅಭಿವ್ಯಕ್ತಿಯ ಒಂದು ಸಹಜ ಮಾಧ್ಯಮ. ಸಾಹಿತ್ಯದ ಹೊರಮೈ ಎಂದರೆ ಭಾಷೆ, ಪದಗಳು ಅಂತರಂಗದ ಅಭಿವ್ಯಕ್ತಿಯ ಭಾಗವಾದರೆ, ಭಾಷೆಯು ವೈಚಾರಿಕತೆಯನ್ನು ಬಹಿರಂಗಗೊಳಿಸುತ್ತದೆ. ಲೇಖಕನ ಭಾಷೆಯ ಜೀವ ಬರಹಗಾರನ ನಿಪುಣತೆಯಲ್ಲಿರುತ್ತದೆ. ಈ ರೀತಿಯಾದ ಭಾಷೆ ಸಾಹಿತ್ಯ ಕೃತಿಗೆ ಬಲ ನೀಡುತ್ತದೆ. ಪ್ರೊ.ಮಾಲತಿ ಪಟ್ಟಣಶೆಟ್ಟಿಯವರು ವೈಶಿಷ್ಟ್ಯಪೂರ್ಣವಾದ ಭಾಷೆಯನ್ನು ಇಲ್ಲಿ ಬಳಸಿದ್ದಾರೆ. ಈ ಕಥೆಯಲ್ಲಿ ಗ್ರಾಂಥಿಕ ಭಾಷೆ ಹೆಚ್ಚು ಕಂಡು ಬಂದರೂ ಅಲ್ಲಲ್ಲಿ ಗ್ರಾಮ್ಯ ಸೊಗಡಿನ ಭಾಷೆಯನ್ನು ಬಳಸಿ ಕಥೆಯನ್ನು ಆಸಕ್ತಿದಾಯಕ ಮಾಡಿದ್ದಾರೆ. 'ಆನಂದ ವಿಹಾರ' ಎಂಬ ಸಾರಾಯಿ ಅಂಗಡಿಯನ್ನು ಊರಿನಿಂದ ಕಿತ್ತೊಗೆಯಬೇಕೆಂದುಕೊಂಡು ಸಭೆ ಸೇರಿದ ಸಂದರ್ಭದಲ್ಲಿ ಊರಿನ ಸರಪಂಚರು "ಇಂದಿನ ಈ ಮೀಟಿಂಗ್ ಕೂಡಿಸಲಿಕ್ಕ ಒಂದು ಬಾಳ ಮಹತ್ವದ ಕಾರಣ ಐತಿ,..ಸಂಕ್ಷಿಪ್ತವಾಗಿ ಅದರೊಳಗಿನ ಹಕೀಕತ್ತು ಏನ ಐತಿ ಅಂದ್ರ ನಮ್ಮ ಊರಾಗ ಆನಂದ ವಿಹಾರ ಅಂಗಡಿ ಸುರು ಆದಾಗಿನಿಂದ ಅನೇಕ ಜನರಿಗೆ ತೊಂದರೆ ಆಗೈತಿ, ಅದಕ್ಕೆ ನಮ್ಮ ಗುರುಗಳು ಅವರೊಳಗೆ ವಿಶೇಷವಾಗಿ ನಮ್ಮ ಮಾಸ್ತರ ಆನಂದ ದೇಸಾಯಿ ಅವರು ಹಿಂಗ ವಿನಂತಿ ಮಾಡಿಕೊಂಡಾರ, ಊರಿನ ಜನ ಹಿತಕ್ಕಾಗಿ, ಊರಿನ...ಮಕ್ಕಳ ಹಿತಕ್ಕಾಗಿ ಈ ಮೇಲ್ಕಂಡ ಅಂಗಡಿಯನ್ನು ಕಿತ್ತೊಗೆಯಬೇಕು" ಎಂದು ಹೇಳುವ ಮಾತಿನಲ್ಲಿ ಗ್ರಾಮೀಣ ಭಾಷೆಯ ಜೀವಂತಿಕೆಯನ್ನು ಕಾಣಬಹುದು.

ಸಭಾ ಮಧ್ಯದಲ್ಲಿ ಪ್ರವೇಶಿಸಿದ ಹೆಣ್ಣೊಬ್ಬಳು ತನ್ನ ನೋವನ್ನು ತೋಡಿಕೊಳ್ಳುವ ರೀತಿ ಹೀಗಿದೆ – "ಶರಣ ರೀ ಯಪ್ಪಾ ಕುಂತ ದೈವಕ್ಕೆಲ್ಲಾ ಕೈ ಮುಗಿದು ಒಂದು ಮಾತು ಸೆರಗೊಡ್ಡಿ ಬೇಡ್ಕೊಂತೇನಿ ಯಪ್ಪಾ ನಾವು ನಿಮ್ಮ ಊರವ್ರ ತಂದೆ, ನಿಮ್ಮ ಮೀಟಿಂಗೈತಿ ಅಂತ ಕೇಳಿ ನಮ್ಮ ಕಷ್ಟಾನ ಹೇಳಾಕ ಬಂದೇವ್ರಿ. ನಾವು ಬಡವ್ರು, ತಿಳೀದವ್ರು, ಹೆಣ್ಣುಮಕ್ಕಳು; ಆದ್ರೂ ನಮ್ಮ ಸಂಕಟ ನಿಮ್ಮ ಉಡ್ಯಾಗ ಹಾಕೊತೀರಿ ಅಂತ ಇಲ್ಲೇ ಬಂದ್ವಿ ಹಡದಪ್ಪಗೋಳ"... ಈ ರೀತಿಯಾಗಿ ಗ್ರಾಮ್ಯ ಭಾಷೆಯ ಸೊಗಡನ್ನು ಪ್ರೊ.ಮಾಲತಿ ಪಟ್ಟಣಶೆಟ್ಟಿಯವರು ತಮ್ಮ ಕಥೆಯುದುದ್ದಕ್ಕೂ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ.

ಕಥೆಯಲ್ಲಿ ವಾಸ್ತವಿಕತೆಯ ನೈಜ ಚಿತ್ರಣ ಎದ್ದು ಕಾಣುತ್ತದೆ. ಪ್ರತಿಯೊಂದು ಪಾತ್ರಗಳಾಡುವ ಭಾಷೆ ಜೀವಂತವಾಗಿ ಕಂಡುಬರುತ್ತದೆ. ಗ್ರಾಮೀಣ ಸಂಸ್ಕೃತಿಯ ಕೆಲವು ಗಾದೆಮಾತುಗಳು, ನುಡಿಗಟ್ಟುಗಳು, ಲೇಖಕರ ಕೌಶಲ್ಯ ಮತ್ತು ಕಥಾ ಶಿಲ್ಪದ ಶ್ರೀಮಂತಿಕೆಯನ್ನು ತೋರಿಸುತ್ತದೆ. "ಬೇಲಿಯೇ ಎದ್ದು ಹೊಲ ಮೇಯ್ದರೇ", "ದಡವಿಲ್ಲದ ರುಂಡದಂತೆ", ಹೆಣ ಮಡಚತಾರ, ಓಡಿಸಿ ಬಿಡ್ರೋ, ಹಾಳಾಗತೀರಿ ಇನ್ನೂ ಮುಂತಾದ ಪದ ಪ್ರಯೋಗಗಳಿಂದ ಕಥೆ ನೈಜ ಚಿತ್ರಣವನ್ನೇ ಕಣ್ಣೆದುರಿಗೆ ತಂದು ನಿಲ್ಲಿಸುತ್ತದೆ.

**ಸಮಾರೋಪ**

ಸಾಮಾಜಿಕ ಅನ್ಯಾಯದ ವಿರುದ್ಧ ಬಂಡೇಳುವ ಈ ಕಥೆ ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ತಿಳಿಸುತ್ತದೆ. ಮಾನವೀಯತೆಯನ್ನು ಮಾರಿಕೊಂಡು ಬದುಕುವ ಊರಿನ ಸರಪಂಚರು, ಪ್ರಜೆಗಳ ಸಂಕಷ್ಟಕ್ಕೆ ಬೆಲೆ ಕೊಡದ ಸ್ವಾರ್ಥ, ನೀಚತನಗಳು ಕೊನೆಗೆ ನಿರ್ನಾಮವಾಗುವುದನ್ನು ಕಾಣಬಹುದು. ಜನರ ನೋವುಗಳಿಗೆ ಸ್ಪಂದಿಸದ ಅಧಿಕಾರಿ ವರ್ಗದ ಜನರೇ ಭ್ರಷ್ಟರಾದರೆ ಸಮಾಜದಲ್ಲಿ ಏರು ಪೇರುಗಳಾಗುತ್ತವೆ. ಅಲ್ಲದೇ ಅದಕ್ಕೆ ಜನರಿಂದಲೇ ತಕ್ಕ ಉತ್ತರ ಸಿಕ್ಕುತ್ತದೆ ಎಂಬುದಕ್ಕೆ ಈ ಕಥೆಯು ನಿದರ್ಶನವಾಗುತ್ತದೆ.

ಒಟ್ಟಾರೆಯಾಗಿ ಸಮಾಜದಲ್ಲಿ ವಾಸಿಸುವ ಪ್ರತಿಯೊಬ್ಬ ಪ್ರಜೆಯು ಉತ್ತಮ ಸಮಾಜ ನಿರ್ಮಾಣಕ್ಕೆ ಕಾರಣೀಭೂತನಾಗುತ್ತಾನೆ. ಆನಂದ ದೇಸಾಯಿಯವರಂತಹ ಆದರ್ಶವಾದಿ ಶಿಕ್ಷಕನಿಂದ ಉತ್ತಮ ಸಮಾಜ ನಿರ್ಮಾಣವಾಗುತ್ತದೆ ಎಂಬುದನ್ನು ಪ್ರೊ.ಮಾಲತಿ ಪಟ್ಟಣಶೆಟ್ಟಿಯವರು ಸಾಮಾಜಿಕ ಬದಲಾವಣೆಯ ನಿಟ್ಟಿನಲ್ಲಿ ಈ ಕಥೆಯ ಮೂಲಕ ನಿರೂಪಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**

1. ಇಂದು ನಿನ್ನಿನ ಕಥೆಗಳು– ಮಾಲತಿ ಪಟ್ಟಣಶೆಟ್ಟಿ, ಕೃತಿ ಪ್ರಕಾಶನ ಧಾರವಾಡ–1988
2. ಪ್ರೊ. ಮಾಲತಿ ಪಟ್ಟಣಶೆಟ್ಟಿಯವರ ಗದ್ಯ ಸಾಹಿತ್ಯ– ಸೇವಂತಿ ಎಸ್. ಕಾಂಬಳೆ, ಸಾಹಿತ್ಯ ಸಂಗೀತ ಕಲಾನೀಕೇತನ ಪ್ರಕಾಶನ, ಧಾರವಾಡ–2011
3. ಕನ್ನಡ ಕಥನ ಸಾಹಿತ್ಯ ಕಾದಂಬರಿ– ಜಿ.ಎಸ್. ಆಮೂರ, ಶ್ರೀಹರಿ ಪ್ರಕಾಶನ,ಧಾರವಾಡ–1994
4. ವಿದ್ಯಾರ್ಥಿ ಭಾರತಿ– ಡಾ.ರಾಜೇಂದ್ರ ನಾಯಕ (ಪ್ರ.ಸಂ), ಡಾ.ಕೃಷ್ಣ.ನಾಯಕ(ಸಂ), ಪ್ರಸಾರಾಂಗ, ಧಾರವಾಡ–2015